# ಡಾ. ಹೆಬ್ಬಾಲೆ ಕೆ. ನಾಗೇಶ ಅವರ ಬಾಡಿಗೆದೇವರು ಕಥೆ: ದಲಿತ ವಿಮರ್ಶೆ

**ಎನ್. ಎಸ್. ವೀರೇಶ ಉತ್ತಂಗಿ**
ಉತ್ತಂಗಿ (ಗ್ರಾಮ ಮತ್ತು ಅಂಚೆ)
ಹೂಹಡಗಲಿ (ತಾಲ್ಲೂಕು)
ವಿಜಯನಗರ (ಜಿಲ್ಲೆ)

**Article Link: https://aksharasurya.com/2024/01/veeresha-n-s/**

## ABSTRACT:

ಡಾ. ಹೆಬ್ಬಾಲೆ ಕೆ. ನಾಗೇಶ ಅವರು ಕೊಡಗು ಮೂಲದವರು. ಈಗ ಹೊಸಪೇಟೆಯಲ್ಲಿ ನೆಲೆಸಿದ್ದು, ಹಂಪಿ ಕನ್ನಡ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿ ನಿವೃತ್ತರಾಗಿದ್ದಾರೆ. ಸಮಕಾಲೀನ ದಲಿತ ಕಥೆಗಾರರಲ್ಲಿ ಒಬ್ಬರು. ಇವರ ಬಾಡಿಗೆದೇವರು ಕಥಾ ಸಂಕಲನದಲ್ಲಿ 5 ಕಥೆಗಳಿವೆ. ಬಾಡಿಗೆ ದೇವರು ಕಥೆಯು ಕೊಡಗಿನ ದಲಿತರ ಬದಕನ್ನು ಎಳೆ ಎಳೆಯಾಗಿ ಚಿತ್ರಿಸುತ್ತದೆ. ಸವರ್ಣೀಯರು ಮತ್ತು ದಲಿತರ ನಡುವಿನ ಸಂಘರ್ಷವು ಕಥಾವಸ್ತುವಾಗಿದೆ. ದಲಿತ ಯುವಕರು ಸರಕಾರದ ಸೌಲಭ್ಯ ಪಡೆದು ಶಿಕ್ಷಣ ಪಡೆಯದೆ ಕೂಲಿ ಆಳುಗಳಾಗಿ ದುಡಿಯುವುದು, ಕೆಲಸ ಸಿಗದಿದ್ದಾಗ ಕುಡಿಯುವುದು, ಇಸ್ಪೀಟ್ ಆಡುವುದು ಮುಂತಾದ ದುಶ್ಚಟಗಳಿಗೆ ಬಲಿಯಾಗವುದನ್ನು ಮನಕಲಕುವಂತೆ ಚಿತ್ರಿಸಿದ್ದಾರೆ. ಉಪ್ಪಾರ ಗೆಡ್ಡೆಶೆಟ್ಟಿಯು ಊರ ಜನರಿಗೆ ದೇವರ ಹೆಸ–ರಿನಲ್ಲಿ ಮಾಡುವ ಮೋಸವನ್ನು ಬಯಲಿಗೆಳೆಯುವಷ್ಟು ದಲಿತರು ಬಲಿಷ್ಟರು. ವ್ಯವಸ್ಥೆಯೊಂದಿಗೆ ರಾಜಿ ಮಾಡಿಕೊಳ್ಳಲು ಬಯಸುವ ಹಿರಿಯ ತಲೆಗಳು, ಅದನ್ನು ವಿರೋಧಿಸುವ ಯುವ ಮನಸ್ಸುಗಳ ಆತುರದ ನಿರ್ಧಾರ, ಅದ–ರಿಂದ ಮೇಲ್ವರ್ಗದಿಂದ ಬಂದ ಬಹಿಷ್ಕಾರ, ದಲಿತರನ್ನು ಏಕಾಂಗಿಯಾಗಿಸಿದ ಪರಿಣಾಮ, ಪಕ್ಕದೂರಿಂದ ಮಾರೆವ್ವ ಎಂಬ ದೇವರನ್ನು ಬಾಡಿಗೆ ತಂದು ಹಬ್ಬ ಆಚರಿಸುವ ರೋಚಕತೆ ಹೃದಯಕಲಕುವಂತಿದೆ.

## KEY WORDS:

ದಲಿತ, ವರ್ಗ, ಸಂಘರ್ಷ, ಶಿಕ್ಷಣ, ದೇವರು, ಹಬ್ಬ.

ಡಾ. ಹೆಬ್ಬಾಲೆ ಕೆ. ನಾಗೇಶ ಅವರು ಹೊಸ ತಲೆಮಾರಿನ ಕಾದಂಬರಿಕಾರರು, ಕಥೆಗಾರರು ಹಾಗೂ ಜಾನಪದ ತಜ್ಞರು. ಅವರ ಕಥೆ, ಕಾದಂಬರಿಗಳಿಗೆ ದಲಿತರ ಬದುಕು ವಸ್ತುಗಳಾಗಿವೆ. ದಮನಿತರ ನೋವು ನಲಿವುಗಳಿಗೆ, ಶೋಷಿತರ ಬದುಕಿನ ಬವಣೆಗಳಿಗೆ ಸ್ಪಂದಿಸುವ ನಿಟ್ಟಿನಲ್ಲಿ ಸಾಗುತ್ತವೆ. ಅಂದರೆ ದಲಿತರ ಬದುಕಿನ ವಿವಿಧ ಸ್ಥರಗಳು ಡಾ. ಹೆಬ್ಬಾಲೆಯವರ ಕಥೆಗಳ ವಸ್ತುಗಳಾಗಿವೆ ಎಂಬುದು ಮುಖ್ಯ ಅಂಶವಾಗಿದೆ. ಸ್ವತಃ ದಲಿತರೇ ಆಗಿರುವ ಡಾ. ನಾಗೇಶ ಅವರು ತಾವು ಬದುಕಿನಲ್ಲಿ ಸವರ್ಣೀಯರಿಂದ ಅನುಭವಿಸಿದ ನೋವುಗಳ ಜೊತೆಗೆ, ತಮ್ಮ ಸುತ್ತಲಿನ ದಲಿತ ವರ್ಗ ಪಟ್ಟ ಸಂಕಷ್ಟಗಳು, ಎದುರಿಸಿದ ಸಮಸ್ಯೆಗಳನ್ನು ತಮ್ಮ ಕಥೆ, ಕಾದಂಬರಿಗಳಿಗೆ ವಸ್ತುಗಳಾಗಿಸಿದ್ದು ತಿಳಿದು ಬರುತ್ತದೆ. ದಲಿತ ಕೇಂದ್ರಿತ ಅವರ ಚಿಂತನೆಗಳು ವಾಸ್ತವದ ನೆಲೆಗಳಲ್ಲಿ ಒಡಮೂಡಿದ್ದು ಕಂಡುಬರುತ್ತದೆ. ದಲಿತ ಸಾಹಿತ್ಯ ವಿಮರ್ಶೆ ಇಂದು ನಿನ್ನೆಯದಲ್ಲ, ದಲಿತ ಸಾಹಿತ್ಯದ ಹುಟ್ಟಿನೊಂದಿಗೆ ದಲಿತ ವಿಮರ್ಶೆ ಹುಟ್ಟಿದೆ. ಆ ಮೂಲಕ ದಲಿತ ಸಾಹಿತ್ಯದ ಪರಿಚಯ ನಾಡಿನಾದ್ಯಾಂತ ಪಸರಿಸಿದ್ದು ತಿಳಿದು ಬರುತ್ತದೆ.

ಡಾ. ಹೆಬ್ಬಾಲೆ ಕೆ. ನಾಗೇಶ ಅವರು ಬಾಡಿಗೆ ದೇವರು ಕಥೆಯಲ್ಲಿ ಇಡೀ ದಲಿತ ಲೋಕವನ್ನೇ ತೆರೆದಿಡುತ್ತಾರೆ. ಬಾಡಿಗೆ ದೇವರು ಕಥೆಯ ಶೀರ್ಷಿಕೆಯೇ ರೋಮಾಂಚನ ಉಂಟು ಮಾಡುತ್ತದೆ. 'ಬಾಡಿಗೆ ದೇವರು' ಎಂಬುದು ನಮ್ಮ ಸಮಾಜದಲ್ಲಿ ಇರುವ ಅಸಹಾಯಕತೆ, ಅಸಮಾನತೆಯನ್ನು ಎತ್ತಿತೋರಿಸುತ್ತದೆ. ದಲಿತರಿಗೂ ಊರಿನ ಸವರ್ಣೀಯರಿಗೂ ನಡುವೆ ನಡೆದ ಸಂಘರ್ಷದ ಪ್ರತಿರೂಪವೇ ಬಾಡಿಗೆ ದೇವರು ಕಥೆಯ ಸೃಷ್ಠಿ. ತಮ್ಮ ಹಾಗೂ ಊರಿನ ಜನರ ನಡುವೆ ಆಗಾಗ ನಡೆಯುವ ಗುದ್ದಾಟ, ಹೊಡೆದಾಟಗಳು ಕೇರಿಯ ಜನರನ್ನು ಏಕಾಂಗಿಯಾಗಿಸಿ ಊರೊಳಗಿನ ದೇವರ ದರ್ಶನಕ್ಕೂ ಅವಕಾಶ ವಂಚಿತರನ್ನಾಗಿಸುತ್ತದೆ. ಆಗ ಹೊಸ ದೇವಾಲಯ ಕಟ್ಟಿಕೊಳ್ಳುವುದು ಕನಸಿನ ಮಾತು. ನಿತ್ಯ ಬದುಕುವುದು ಊರ ಗೌಡರ ಹೊಲ ಗದ್ದೆಗಳಲ್ಲಿ ಕೂಲಿ ಕೆಲಸ ಮಾಡಿ ಪಡೆದ ಹಣದಿಂದ. ಹಾಗಿರುವಾಗ ದಲಿತರು ಹೊಸ ದೇವಾಲಯ ಕಟ್ಟಿಕೊಳ್ಳುವುದು ದೂರದ ಮಾತು. ಆಸ್ತಿಕ ಮನಸುಗಳು ಊರಿನ ಬಸಪ್ಪ ದೇವರ ದರ್ಶನದಿಂದ ವಂಚಿತರಾದಾಗ, ಅವರಲ್ಲಿರುವ ದೈವ ಭಕ್ತಿ ಪಕ್ಕದ ಊರಿನ ತಮ್ಮದೇ ಜನರ ಮಾರೆವ್ವನನ್ನು ಬಾಡಿಗೆ ತಂದು ಕೇರಿಯಲ್ಲಿ ಪ್ರತಿಷ್ಠಾಪಿಸಿ ಸಂಭ್ರಮ ಪಡುವಂತೆ ಮಾಡಿರುವುದನ್ನು ಗಮನಿಸಿದಾಗ, ದಲಿತರಲ್ಲಿರುವ ದೈವ ಭಕ್ತಿ, ಶ್ರಧ್ದೆ, ನಿಷ್ಠೆ ಎಂಥದೆಂದು ತಿಳಿದುಬರುತ್ತದೆ.

ಊರಿನಗೌಡ ಮೂಳೆಗೌಡ ದೊಡ್ಡ ಜಮೀನ್ದಾರ. ಆಗರ್ಭ ಶ್ರೀಮಂತ. ಆದರೆ ಭಾರಿ ಜಿಗುಟು ಮನುಷ್ಯ ಎಂಬುದನ್ನು ಕಥೆಗಾರರು ಸ್ಪಷ್ಟಪಡಿಸುತ್ತಾರೆ. ಈತನ

ಮೂಲ ಹೆಸರು ಈರೇಗೌಢ. ಮಾಳದ ಹಬ್ಬದಂದು ಮಾಡಿದ್ದ ಕೋಳಿ ಸಾರು ಉಣ್ಣುವಾಗ ಕೋಳಿಯ ಮೂಳೆ ಗಂಟಲಲ್ಲಿ ಸಿಕ್ಕಿಹಾಕಿಕೊಂಡು ನಂತರ ಅದನ್ನು ಶಸ್ತ್ರಚಿಕಿತ್ಸೆ ಮಾಡಿಸಿಕೊಂಡು ತೆಗೆಸಿಕೊಂಡಂದಿನಿಂದ, ಈತನಿಗೆ ಈರೇಗೌಡ ಎಂಬ ಹೆಸರಿನ ಬದಲು ಮೂಳೆಗೌಡ ಎಂಬ ಹೆಸರು ಬಂದಿತೆಂದು ಕಥೆಗಾರರು ಗೌಡನ ಹೆಸರಿನ ಬದಲಾವಣೆಯ ಹಿನ್ನಲೆ ಬಿಚ್ಚಿಡುತ್ತಾರೆ. ಹಾಗೆಯೇ ಕೇರಿಯ ಜನರನ್ನು ಬೆಳಗಿನಿಂದ ಸಂಜೆಯತನಕ ದುಡಿಸಿ ಹೊಟ್ಟೆಗೂ ಬಟ್ಟೆಗೂ ಸಾಕಾಗದಷ್ಟು ಹಣ ನೀಡುವುದರ ಮೂಲಕ ಅವರು ಹಸಿವಿನಿಂದ ಬಳಲಿ ಬೆಂಡಾಗಿ ಮೂಳೆಗಳು ಎಲ್ಲರ ದೇಹದಿಂದ ಕಾಣುವಂತೆ ಮಾಡಿರುವ ವಾಸನೆ ಈರೇಗೌಡ ಮೂಳೇಗೌಡ ಆಗಿರುವ ಹಿನ್ನಲೆಯಲ್ಲಿ ಅಡಗಿದೆ. ಅದನ್ನು ಕಥೆಗಾರರು ಎಲ್ಲಿಯೂ ಬಿಚ್ಚಿ ಹೇಳುವುದಿಲ್ಲ. ಆ ಮೂಲಕ ಓದುಗರ ಗಮನ ಬೇರೆಕಡೆ ಸೆಳೆಯುತ್ತಾರೆ. ಅವರ ಹೊಲ ಗದ್ದೆಗಳಲ್ಲಿ, ಕೆಲಸಕ್ಕೆ ಹೋದ ದಲಿತ ಕೇರಿಯ ಗಂಡಸರಿಗೆ ಬೀಡಿ ಸೇದಲೂ, ಹೆಂಗಸರಿಗೆ ಎಲೆ ಅಡಕೆ ಹಾಕಿಕೊಳ್ಳಲು ಬಿಡುತ್ತಿರಲಿಲ್ಲ ಎಂಬುದನ್ನು ಗಮನಿಸಿದಾಗ ಈರೇಗೌಡ ಮೂಳೇಗೌಡ ಆಗಿರುವ ಹಿನ್ನಲೆ ಅರ್ಥವಾಗುತ್ತದೆ. ಅಂದರೆ ಗೌಡ ಬಡವರ ರಕ್ತಹೀರಿ ಅವರನ್ನು ದುಡಿಸಿ ಮೂಳೆಗಳ ಮೂಟೆಗಳನ್ನಾಗಿಸಿದ್ದು ಕಂಡುಬರುತ್ತದೆ.

ಊರಿನ ಪರಮಾತ್ಮನೆನಿಸಿಕೊಂಡಿದ್ದ ಮೂಳೆಗೌಡನ ಹೊಲ ಗದ್ದೆಗಳಲ್ಲಿ ಬಡ್ಡ, ಬಸಿಯ, ಗಡ್ರ, ಶೀನ, ಸಣ್ಣಿ, ಈರಿ, ಕರ್ಕಿ ಇನ್ನೂ ಅನೇಕರು ದಿನನಿತ್ಯ ಕೆಲಸಕ್ಕೆ ಹೋಗುತ್ತಿದ್ದರು. ಬುಧವಾರ ಸಂತೆ ನಡೆಯುತ್ತಿತ್ತು. ಅಂದು ಕೆಲಸಕ್ಕೆ ರಜೆ ಮಾಡಿ, ಬಟವಾಡೆ ಮಾಡುತ್ತಿದ್ದರು. ಗೌಡರಿಂದ ಕೂಲಿ ಹಣ ಪಡೆದು ಸಂತೆಯಲ್ಲಿ ದವಸ–ಧಾನ್ಯ, ತರಕಾರಿ ಕೊಳ್ಳಲು ಬಹುಶಃ ಕೆಲಸಕ್ಕೆ ರಜೆ ಮಾಡುತ್ತಿದ್ದಿರಬೇಕು. ಇದೇ ಹುಡುಗರು ಸಂತೆ ಮುಗುಸಿ ಊರಹೊರಗೆ ಇರುವ ಹುಣುಸೆ ಮರದ ನೆರಳಲ್ಲಿ ಇಸ್ಪೇಟು ಆಟ ಆಡುತ್ತಾರೆ. ಈ ಆಟ ಮುಗಿಯುವವರೆಗೂ ತಾವು ತಂದಿದ್ದ ಕಳ್ಳಬಟ್ಟಿ ಸರಾಯಿ, ಪುರಿ, ಕಡ್ಲೆ, ಬಾಡೆಸ್ರು ತಿಂದು ಕುಡಿಯುತ್ತಿದ್ದರು. ಜೊತೆಗೆ ಬೀಡಿ ಸೇದುತ್ತಿದ್ದರು. ಇವರ ಜೊತೆಯಲ್ಲಿ ಸಾಬ್ರ ಅಬ್ಬಾಸ್ ಕೂಡ ಸೇರಿಕೊಂಡಿದ್ದ. ಈ ಇಷ್ಟು ಹುಡುಗರು ಅವಿದ್ಯಾವಂತರು. ಇದ್ದುದರಲ್ಲಿ ಶೀನ ಮಾತ್ರ ಎಸ್.ಎಸ್.ಎಲ್.ಸಿ. ಓದಿದ್ದ. ಅವನು ಪೀವನ್ ಹುದ್ದೆಗೆ ಅರ್ಜಿ ಹಾಕ್ತಾನೇ ಇದ್ದ. ಇವನು ಏಳನೇ ತರಗತಿ ಓದುವಾಗ ತರಗತಿಗೆ ಲೀಡರ್ ಆಗಿದ್ದ. ಇವನಿಗೆ ಕೇರಿಯಲ್ಲಿ ಒಳ್ಳೆಯ ಮರ್ಯಾದೆ ಇತ್ತು. ಕೇರಿಯ ಮಕ್ಕಳು ಇವನನ್ನೇ ತಮ್ಮ ಲೀಡರ್ ಮಾಡಿಕೊಂಡಿದ್ದರು. ಕಥೆಗಾರರು ನಿರೂಪಿಸುವ ಹಾಗೆ ಕೇರಿಯ ಮಕ್ಕಳು ಸರಕಾರದ ಆಧುನಿಕ ಸೌಲಭ್ಯಗಳನ್ನು ಬಳಸಿಕೊಂಡು, ಶಿಕ್ಷಣ ಪಡೆಯದೆ ಅವಿದ್ಯಾವಂತರಾಗಿ ಉಳಿದಿದ್ದು ಖೇದಕರ ಸಂಗತಿ. ಈ ಹೊತ್ತು ಸರಕಾರ ನೀಡುವ ಶಿಕ್ಷಣದ ಸೌಲಭ್ಯಗಳ

ಬಗ್ಗೆ ಕೇರಿಯ ಜನರಿಗೆ ಮತ್ತು ಮಕ್ಕಳಿಗೆ ತಿಳಿಯದೇ ಹೋದದ್ದು ಶೀನನಂಥ ಯುವಕರು ಶಿಕ್ಷಣದ ಅವಶ್ಯಕತೆಗಳ ಬಗ್ಗೆ ತನ್ನ ಸಹಚರರಿಗೆ ತಿಸದೇ ಹೋದದ್ದು ವಿಪರ್ಯಾಸದ ಸಂಗತಿಯಾಗಿ ಕಂಡುಬರುತ್ತದೆ.

ದಲಿತ ಹುಡುಗರ ಮತ್ತು ಅಬ್ಬಾಸ್ ಮಾತನಾಡುವ ಕನ್ನಡ ಭಾಷಿಕ ಪದಗಳನ್ನು ಕಥೆಗಾರರು ಸಂಗ್ರಹಿಸಿ ಬಳಸಿರುವುದು ರಮ್ಯಾತ್ಮಕವಾಗಿ ಕಾಣುತ್ತದೆ ಹಾಗೂ ಔಚಿತ್ಯಪೂರ್ಣವಾಗಿದೆ.

ಇಸ್ಪೇಟ್ ಆಟ ಆಡುತ್ತಾ ಅವರವರೆ ಮಾತಾಡುತ್ತಾ ಚರ್ಚಿಸುತ್ತಾರೆ ಅದನ್ನು ಕಥೆಗಾರರು ಹೀಗೆ ಹೇಳುತ್ತಾರೆ

“ಬಸಿಯ... ಜೊಲ್ಲು ಮೋರೆ ಹಾಕೊಂಡು ಶೀನಣ್ಣ... ಇನ್ನೊಂದು ಆಟನಾ ಆಡಾದ, ಲೋ... ಈಗ್ಲೇ ವತ್ತುವೊಯ್ತು ಬಡ್ಡ... ನಿಮ್ಗೆ ಗೊತ್ತಿಲ್ವಾ, ಬಸಿಯ... ಯೇನು? ಅದ್ಕೆ ಮತ್ತೆ ನಿಮ್ಮ ತಲೇಲಿ ಜೇಡಿಮಣ್ಣು ತುಂಬದೆಂತ... ಅದೇನು ಸರಿಯಾಗಿ ಹೇಳು ಅಂದ ಶೀನ, ಬಡ್ಡ... ಅದೇ ನಮ್ಮ ಉಪ್ಪಾರ ಬೀದಿಲಿ ಮಹಾದೇವ ಶೆಟ್ಟಿಗೆ ಈರಭದ್ರಸ್ವಾಮಿ ದೇವರು ಮೈಮ್ಯಾಗೆ ಬಂದು ಕಷ್ಟಸುಕವ ಪರಿಹಾರಯಾಳ್ತದೆ. ಅಲ್ಲಿಗೆ ವಾಗನ ಎಲ್ಲಾವ ಯಾಕಂದ್ರೆ ನಮ್ಮ ಶೀನಣ್ಣಗೆ ಕೆಲ್ಸ ಕ್ಯಾಮೆ ಯಾಕೆ ಇನ್ನೂ ಸಿಕ್ಕಿಲಂತೆ ಕೇಳಾದ, ಅಲ್ದೆ ಆ ನನ್ನ ಮಗ ಉಪ್ಪಾರ ಶೆಟ್ಟಿ ಊರಿನಲ್ಲಿರೋ ಜನ್ಕೆ ಬೂದಿ, ಅಕ್ಕಿಕಾಳು ಮಂತ್ರಿಸಿ ಯಲ್ಲರ ನೂವೆ ಮೋಸ ಮಾಡ್ತವನೆ ಅಂದ ಯಲ್ಲಾ ಅಲ್ಲಿಗೆ ವಾಗನ ಅಂದ” ಎಂದು ಅವರವರು ಚರ್ಚಿಸಿ ತೀರ್ಮಾನಿಸುತ್ತಾರೆ ಇಲ್ಲಿ ಸಂಭಾಷಣೆಯಲ್ಲಿ ಅವಿದ್ಯಾವಂತರ ಭಾಷೆ ಯಥಾವತ್ತಾಗಿ ಬಳಕೆಗೊಂಡಿದೆ.

ಉಪ್ಪಾರ ಬೀದಿಯ ಮಹಾದೇವಶೆಟ್ಟಿಗೆ ವೀರಭದ್ರದೇವರು ಮೈದುಂಬಿ ಜನರ ಕಷ್ಟಗಳಿಗೆ ಪರಿಹಾರ ಸೂಚಿಸುವುದು ಹಾಗೂ ಮಹಾದೇವಶೆಟ್ಟಿ ಜನರಿಗೆ ಬೂದಿ ಅಕ್ಕಿಕಾಳು ಮಂತ್ರಿಸಿಕೊಡುವುದು ಮೋಸದಿಂದ ಕೂಡಿದೆ ಎಂದು ಕೇರಿಯ ಈ ವಿದ್ಯಾವಂತರು ವೈಚಾರಿಕವಾಗಿ ಚಿಂತಿಸುವುದು ಮತ್ತು ಅದನ್ನು ಬಯಲಿಗೆ ಎಳೆಯಬೇಕು ಎಂದು ತೀರ್ಮಾನಿಸುವುದು ನಿಜಕ್ಕೂ ಆಶ್ಚರ್ಯ ಉಂಟುಮಾಡುತ್ತದೆ. ಇಂಥ ಯುವಕರು ಸರ್ಕಾರದ ಸೌಲಭ್ಯಗಳನ್ನು ಬಳಸಿಕೊಂಡು ಕನಿಷ್ಟ ಪಕ್ಷ ಪದವಿಯ ತನಕ ಓದಿದ್ದರೆ ಇಡೀ ಕೇರಿಯೇ ಬೆಳಗುತ್ತಿತ್ತು. ಅವರು ಓದಿನ ಕಡೆಗೆಯಾಕೆ ಗಮನಹರಿಸಲಿಲ್ಲವೋ ತಿಳಿಯದು. ಬಹುಶಃ ಮನೆಯ ಪರಿಸ್ಥಿತಿ ಕಾರಣವಾಗಿರಬಹುದು. ಊರಮಧ್ಯೆ ಬಸಪ್ಪ ದೇವರ ಗಡಿ ಇತ್ತು. ಅದರ ಸುತ್ತ ಬ್ರಾಹ್ಮಣರು, ಲಿಂಗಾಯತರ, ಗೌಡರ, ಬಡಗಿಗಳ, ಕುಂಬಾರ,

ಅಗಸರ ಹಾಗೂ ಉಪ್ಪಾರರ ಬೀದಿಗಳಿದ್ದವು. ಬಸಪ್ಪದೇವರಿಗೆ ಮೇಲ್ವರ್ಗ ಮತ್ತು ಮಧ್ಯಮವರ್ಗದವರು ಗರ್ಭಗುಡಿಯ ಮುಂದೆ ನಿಂತು ಹೂ ಹಣ್ಣು, ಕಾಯಿ, ಕರ್ಪೂರ, ಗಂಧದಕಡ್ಡಿ ತೆಗೆದು ಕೊಟ್ಟು ಪೂಜಾರಿಯಿಂದ ಪೂಜೆ ಮಾಡಿಸಿ ತೀರ್ಥ ಪ್ರಸಾದ ಸ್ವೀಕರಿಸುತ್ತಿದ್ದರು. ಆದರೆ ಹೊಲೆಯರು ಮಾತ್ರ ಬಸಪ್ಪದೇವರುಗುಡಿಯ ಮುಂದಿನ ಅಂಗಳದಲ್ಲಿಯೇ ನಿಂತು ಕೈಮುಗಿಯಬೇಕಿತ್ತು. ಕೇರಿಯವರು ಪೂಜೆ ಮಾಡಿಸುವಾಗ ಹೂ ಹಣ್ಣು ಕರ್ಪೂರ ಅಂಗಳದಲ್ಲಿಟ್ಟರೆ ಪೂಜಾರಿ ಬಂದು ಅದಕ್ಕೆ ನೀರು ಚಿಮುಕಿ ತೆಗೆದುಕೊಂಡು ಹೋಗಿ ದೇವರಿಗೆ ನೈವೇದ್ಯ ಮಾಡಿ ತಂದು ಅಂಗಳದ ಮೇಲೆ ಹಾಕುತ್ತಿದ್ದ. ನಂತರ ಅದನ್ನು ದಲಿತರು ನಮಸ್ಕರಿಸಿ ಹಟ್ಟಿಗೆ ಒಯ್ಯುತ್ತಿದ್ದರು. ಹೀಗೆ ದಿನನಿತ್ಯವೂ ಕೇರಿಯವರು ಮಾಡುತ್ತಿದ್ದರು. ಆದರೆ ವಿದ್ಯೆಕಲಿತ ದಲಿತರಿಗೆ ಇದು ಅಸಹ್ಯ ಅವಮರ್ಯಾದೆಯಾಗಿ ಕಾಣುತ್ತದೆ. ಒಳಗೊಳಗೆ ನೋವು ನುಂಗಿಕೊಂಡು ಬದುಕು ಸಾಗಿಸುತ್ತಾರೆ. ಇವರ ನೋವನ್ನು ಕೇಳುವವರು ಯಾರು? ಯಾರಿಗೆ ಹೇಳಬೇಕು? ಇಂಥ ಅಸಹಾಯಕ ಸ್ಥಿತಿಯಲ್ಲಿ ಎಲ್ಲಾವನ್ನು ಸಹಿಸಿಕೊಂಡು ಕೆಲವಿದ್ಯಾವಂತ ಯುವಕರು ಕಾಲ ತಳ್ಳುತ್ತಿದ್ದರು. ಭಾರತ ಸಂವಿಧಾನದ ಕಾನೂನು ತಮ್ಮ ಹಕ್ಕಿನ ರಕ್ಷಣೆಗೆ ಇದ್ದರೂ ಅದನ್ನು ಕೇಳುವವರು ಯಾರು ಇರಲಿಲ್ಲ. ಕೇ ರಿಯವರು ಊರಿನ ಗೌಡರ ಹೊಲಗದ್ದೆಗಳಲ್ಲಿ ದುಡಿಯಲು ಹೋಗುತ್ತಿರುವುದು ಇದಕ್ಕೆ ಕಾರಣವಾಗಿರಬಹುದು.

ಬುಧವಾರ ರಾತ್ರಿಹೊತ್ತು ಸಂತೆಯಲ್ಲಿ ಕೊಂಡುಕೊಂಡ ವಸ್ತುಗಳ ಖರ್ಚಾದ ಹಣದ ಲೆಕ್ಕಾಚಾರ ಕೆಲವರು ಮಾಡಿದರೆ; ಹೆಂಗಸರು ಮಕ್ಕಳಿಗೆ ಉಣ್ಣಿಸುವುದು, ಕೆಲವರು ರಾಗಿ ಬೀಸುವವರು, ಕೆಲವರು ಮದ್ಯಕುಡಿದು ಜಗಳವಾಡುವ ಸನ್ನಿವೇಶ ಕಂಡುಬರುತ್ತದೆ. ಇಂದಿನ ಸಮಯದಲ್ಲಿ ಹಿಟ್ಟಿನ ಗಿರಾಣಿಗೆ ಹೋಗಿ ರಾಗಿ ಬೀಸಿಕೊಂಡು ಬರದೆ ಮನೆಯಲ್ಲಿಯೇ ಬೀಸಾಕಲ್ಲಿನಲ್ಲಿ ರಾಗಿಬೀಸುವುದನ್ನು ಕಂಡಾಗ ಅವರಿಗೆ ಎಷ್ಟು ಬಡತನವಿತ್ತು ಎಂದು ತಿಳಿದು ಬರುತ್ತದೆ.

ಉಪ್ಪಾರ ಬೀದಿಯ ಮಹಾದೇವ ಶೆಟ್ಟಿಗೆ ಗಂಟಲಲ್ಲಿ ಗಡ್ಡೆಬೆಳೆದು, ನಂತರ ಕೇರಳದ ಮಂತ್ರವಾದಿಯ ಔಷಧಿಯಿಂದ ಗಡ್ಡೆ ಕರಗಿಸಿಕೊಂಡ. ಅಂದಿನಿಂದ ಅವನಿಗೆ ಮಹಾದೇವಶೆಟ್ಟಿ ಎಂಬ ಹೆಸರಿನ ಬದಲು ಗಡ್ಡೆಶೆಟ್ಟಿ ಎಂದು ಹೆಸರಾಯಿತು.

ಅವನ ಮನೆಯ ಒಂದು ಕಟ್ಟೆಯ ಮೇಲೆ ಒಂದು ಸಣ್ಣದೇವರ ಕೋಣೆ ಕಟ್ಟಿಸಿ ಅದರಲ್ಲಿ ಕಾಳಿದೇವತೆ, ಗಣಪತಿ, ಶನಿದೇವರು, ಚಾಮುಂಡಿ ಮತ್ತು ಈಶ್ವರನ ಪೋಟೋಗಳನ್ನು ಇಟ್ಟು ಪೂಜಿಸುತ್ತಿದ್ದ. ಹಾಗೇ ಮೈಗೆ ವಿಭೂತಿ, ಕುಂಕುಮ, ಅರಿಷಿಣ ಹಚ್ಚಿಕೊಂಡು ವೀರಭದ್ರನ ಅವತಾರ ತಾಳಿ ಊರಿನ ಜನರಿಗೆ ಒಳ್ಳೆಯದು

ಕೆಟ್ಟದ್ದು ಹೇಳಿ ಪರಿಹಾರ ಸೂಚಿಸುತ್ತಿದ್ದ. ಊರಿನ ಗೌಡರಿಗೆ ಅವರ ಮಗಳ ಮದುವೆ ವಿಚಾರ ಹೇಳಿ ಭವಿಷ್ಯ ನುಡುದು ಅದರ ಪರಿಹಾರ ಹೇಳುತ್ತಿದ್ದ ಮತ್ತು ನಾಲ್ಕು ಕಾಲಿನ ಬ್ಯಾಟೆಯನ್ನು ಪ್ರತಿಯಾಗಿ ಕೇಳುತ್ತಿದ್ದ. ಬಹುತೇಕ ವೀರಭದ್ರಸ್ವಾಮಿ ಸಸ್ಯಾಹಾರಿ. ಆದರೆ ಈ ಕಥೆಯಲ್ಲಿರುವ ವೀರಭದ್ರಸ್ವಾಮಿ ಮಾಂಸಹಾರಿ ಎಂಬುವುದನ್ನು ಕಥೆಗಾರರು ಸೂಕ್ಷ್ಮವಾಗಿ ತಿಳಿಸುತ್ತಾರೆ.

ಇದನ್ನು ಕುತೂಹಲದಿಂದ ನೋಡಿ ಕೇಳಿಸಿಕೊಂಡ ಬಡ್ಡ ಈರಭದ್ರಸ್ವಾಮಿ ನಮ್ಮ ಶೀನಣ್ಣನಿಗೆ ಸರ್ಕಾರಿ ನೌಕರಿ ಕೊಡ್ಸಿ ಅಂದ. ಆಗ ಗಡ್ಡಶೆಟ್ಟಿ ನೀವು ಪೋಲಿಗಳು ಅಂದು ಬಾರಿಕೋಲಿನಿಂದ ಹೊಡೆದು ಮಠಕ್ಕೆ ಸರಿಯಾಗಿ ಹೋಗದೆ ಹೆಣ್ಣು ಹುಡಿಗಿಯರ ಹಿಂದೆ ಸುತ್ತಿ ಸರಿಯಾಗಿ ಓದದೆ ನೌಕರಿ ಎಲ್ಲಿ ಸಿಗುತ್ತದೆ. ಅವನು ಬಂದು ಎಂಟು ವಾರ ತಣ್ಣೀರಲಿ ಮಿಂದು ನನ್ನ ಸ್ವಾವೆ ಮಾಡ್ಲಿ ಆಮೇಲೆ ನೋಡೋಣ ಎಂದಾಗ ಅವರಿಗೆ ಸಿಟ್ಟು ಬರುತ್ತದೆ. ಎಲ್ಲರನ್ನು ಒಂದೇ ತರ ಕಾಣೊಲ್ಲ. ಗೌಡ್ರಿಗೆ, ಲಿಂಗಾಯತರಿಗೆ ಒಂದು ತರ ಹೇಳುತ್ತಾನೆ. ಹೊಲೆಯರಿಗೆ ಒಂದು ತರ ಹೇಳುತ್ತಾನೆ. ಅವನು ಮಾಡಿದ ಬೇದ ಕಂಡು ಬೇಸರಗೊಳ್ಳುತ್ತಾರೆ ಹೀಗೆ ಜನರ ಕಷ್ಟಕೇಳಿ ಅದಕ್ಕೆ ಪರಿಹಾರ ಹೇಳುತ್ತಾ ಗಡ್ಡೆಶೆಟ್ಟಿ ಇರುವಾಗ ಬಡ್ಡ ತಂದಿದ್ದ ದೊಡ್ಡಪಿನ್ನು ಮುಳ್ಳು ಅವನ ಅಂಡಿಗೆ ಬಲವಾಗಿ ಚುಚ್ಚಿ ಪರಾರಿಯಾದ. ಮುಳ್ಳು ಚುಚ್ಚಿಸಿಕೊಂಡ ಗಡ್ಡೆಶೆಟ್ಟಿ ಚೀರಾಡುತ್ತಾ ಗೌಡ್ರಲ್ಲಿಗೆ ಬಂದು ಪಿರ್ಯಾದೆ ಹೇಳಿದ. ಅವರ ಹತ್ತಿರ ನ್ಯಾಯ ಕೇಳಿದ. ಈ ಕೆಲಸ ಕೇರಿಯ ಬಡ್ಡ ಮಾಡಿದ್ದಾನೆಂದು ನೇರವಾಗಿ ಹೇಳಿದ. "ಇದು ನನ್ನ ಮರ್ಯಾದೆ ಅಲ್ಲ, ಇಡೀ ದ್ಯಾವರದ್ದು, ಅಮ್ಯಾಕೆ ನಮ್ಮ ಊರಿಂದು. ಅದ್ಯಾನು ನಿರ್ಣಯಿಸುತ್ತೀರಿ ನಿಮ್ಗೆ ಬುಟ್ಟದ್ದು" ಎಂದು ಮುಂತಾಗಿ ಗೌಡ್ರು, ಲಿಂಗಾಯತರು, ಬ್ರಾಹ್ಮಣರ ಹತ್ತಿರ ಹೇಳಿದ. ಇದನ್ನು ಕೇಳಿಸಿಕೊಂಡ ಸಾಂಪ್ರದಾಯಿಕ ಮನಸುಗಳು ಒಂದಾಗಿ ಅಂದರೆ ಗೌಡ್ರು, ಲಿಂಗಾಯತರು, ಬ್ರಾಹ್ಮಣರು ಮುಂತಾದವರು ಒಟ್ಟಾಗಿ "ಈ ರೀತಿ ಆದ್ರೆ ಮುಂದೆ ನಮ್ಮ ಗತಿ ಏನು? ಹೊಲಗೇರಿಯವರ ಉಪಟಳ ಜಾಸ್ತಿಯಾಗಿ ಹೋಯಿತು. ಇವರನ್ನು ಹೀಗೆ ಬಿಟ್ಟರೆ ಉಳಿಗಾಲವಿಲ್ಲ" ಎಂದು ಭಾವಿಸಿದರು. ಉಪ್ಪಾರ ಶೆಟ್ಟಿ ಮಧ್ಯೆಬಾಯಿ ಹಾಕಿ "ನಮ್ಮ ನಿಮ್ಮ ಹೆಣ್ಣು ಮಕ್ಕಳು ಕೆಲ್ಸ ಮಾಡೋತಾವ ಬೀದಿಯಲ್ಲಿ ತಿರುಗಾಡುವಂತಿಲ್ಲ. ಹಿರಿಯೋರು, ಕಿರಿಯೋರು ಅನ್ನೋ ಮರ್ವಾದೆ ಇಲ್ಲಾ, ಆ ನನ್ನ ಮಕ್ಕಳ ಹಟ್ಟಲಿ ತಿನ್ನೋಕೆ ಕೂಳಿಲ್ಲ. ಏನೋ ಪಟ್ಟಣದಲ್ಲಿ ನಾಕ್ ಅಕ್ಷರ ಕಲ್ತಿದ್ದೀವಿ ಅಂತ ನಮ್ಮ ಜೊತೆಯಲ್ಲಿ ಸರಿಸಮನಾಗಿ ಕುಳಿತು ಕಾಫಿ ಹೀರೋದೇನು, ಬೀಡಿ ಬದಲು ಸಿಗರೇಟನ್ನೇ ತಕ್ಕೋಂಡು ಕಾಲ ಮೇಲೆ ಕಾಲುಹಾಕಿಕೊಂಡು ಹೊಗೆ ಮುಕ್ಕೆ ಬಿಡುತ್ತಾ ಕುಳಿತಿರುತ್ತಾರೆ. ನಾವು ಎದುರಿಗೆ ಹೋಗ್ತಾ ಇದ್ರೆ, ಎದೆ ಮುಂದಕ್ಕೆ ಮಾಡಿ ಗುಂಡಿ ಬಿಚ್ಕೊಂಡು ಹೋಗ್ತಾರೆ,

ದಿಮಾಕು ಬೇರೆ. ಈ ನನ್ನ ಮಕ್ಕಳಿಗೆ ದಯೆ ದಾಕ್ಷಿಣ್ಯಂತ ನಾವು ಕುಳಿತರೆ ಊರಲ್ಲಿ ಕಿಂಚಿತ್ತೂ ಬೆಲೆ ಇರೋದಿಲ್ಲ ನೋಡಿ. ಅದೇ ತೊಟ್ಟಿ ಮನೆಯ ಶಾನಭೋಗರ ಪುಷ್ಪನ್ನ ಚಲುವ ಹಾರಿಸಿಕೊಂಡು ಹೋಗಿ ಲಗ್ನ ಆದ. ಅವಳು ದನ ಎಮ್ಮೆ ಕೋಣದ ಬಾಡು ತಿನ್ನುತ್ತಾಳೆ. ಅಂತ ಸ್ಥಿತಿಗೆ ತಂದು ನಮ್ಮ ಕುಲ ಗೋತ್ರ ಮಣ್ಣುಪಾಲು ಮಾಡುತ್ತಾರೆ. ಈ ನನ್ನ ಮಕ್ಕಳಿಗೆ ಸರಿಯಾಗಿ ಪಾಠ ಕಲ್ಸಬೇಕು ಏನಂತೀರಿ" ಎಂದು ಹೇಳಿದಾಗ ಎಲ್ಲರೂ ಕೇರಿಯವರಿಗೆ ಬುದ್ಧಿ ಕಲಿಸುವ ನಿರ್ಣಯಕ್ಕೆ ಬರುತ್ತಾರೆ.

ಆದ ಘಟನೆ ತುಂಬಾ ಚಿಕ್ಕದು. ಅದನ್ನು ಮಾಡಿದವನು ಕೇರಿಯ ಹುಡುಗನೆಂಬುದನ್ನು ಮುಖ್ಯವಾಗಿಟ್ಟುಕೊಂಡು ಅದನ್ನು ದೊಡ್ಡದು ಮಾಡಿ ಸಂಘರ್ಷಕ್ಕೆ ತಿರುಗಿಸಿದ್ದು ನಿಜಕ್ಕೂ ನಾಚಿಕೆ ಹುಟ್ಟಿಸುವಂಥದ್ದು. ನ್ಯಾಯ ಪಂಚಾಯಿತಿ ಹೇಳೋರೆ ಈ ರೀತಿ ನಿರ್ಣಾಯ ತೆಗೆದು ಕೊಂಡದ್ದು ಒಳ್ಳೆಯ ಬೆಳವಣಿಗೆಯಲ್ಲ. ನ್ಯಾಯ ಪಂಚಾಯಿತಿ ಸೇರಿಸಿ ತಪ್ಪು ಮಾಡಿದ ವ್ಯಕ್ತಿಗೆ ಶಿಕ್ಷೆ ಕೊಡಬಹುದಿತ್ತು. ಅದರ ಬದಲು ಉಪ್ಪಾರಶೆಟ್ಟಿ ಮಾತು ಕೇಳಿ ದಲಿತರು ಮತ್ತು ಸವರ್ಣೀಯರ ಸಂಘರ್ಷಕ್ಕೆ ನಾಂದಿ ಹಾಡಿದರು. ಇವರ ಪ್ರಕಾರ ದಲಿತರು ಅಕ್ಷರ ಕಲಿಬಾರದು, ಇವರ ಸರಿಸಮ ಹೋಟೆಲಿನಲ್ಲಿ ಕುಳಿತು ಕಾಫಿ ಕುಡಿಯಬಾರದು, ಕಾಲು ಮೇಲೆ ಕಾಲು ಹಾಕಿ ಕೂಡಬಾರದು, ಸಿಗರೇಟು ಸೇದಬಾರದು, ಮೇಲ್ವರ್ಗದ ಹುಡುಗಿಯನ್ನ ಪ್ರೀತಿಸಿ ಮದುವೆ ಆಗಬಾರದು. ಒಟ್ಟಾರೆಯಾಗಿ ಸ್ವತಂತ್ರವಾಗಿ ದಲಿತರು ಜೀವಿಸಬಾರದೆಂದು ಸಾಂಪ್ರದಾಯಿಕ ಮನಸುಗಳು ಯೋಚಿಸುವುದನ್ನು ಡಾ. ನಾಗೇಶ ಅವರು ಎಳೆಎಳೆಯಾಗಿ ಬಿಚ್ಚಿತೋರಿಸುತ್ತಾರೆ. ಆದ್ದರಿಂದ ಇದು ಬರಿ ಕಥೆಯಲ್ಲ ದಲಿತರ ಬದುಕಿನ ವ್ಯಥೆ ಎಂದು ಗ್ರಹಿತವಾಗುತ್ತದೆ.

ಇತ್ತ ಕೇರಿಯಲ್ಲಿ ಹಿರಿಯರು ಸೇರಿ ಊರಿನಲ್ಲಾದ ಘಟನೆಯ ಬಗ್ಗೆ ತಿಳಿದು ಬೇಸರ ಪಟ್ಟು, ಅದರಲ್ಲಿ ಭಾಗಿಯಾದ ಹುಡುಗರಿಗೆ ಬುದ್ಧಿವಾದ ಹೇಳಿ 'ನಾಕೈದು ಜನ ಮಾತ್ರ ಕಾಡಿಗೆ ಹೋಗಿ ತಲೆ ಮರ್ಸಕೊಳ್ಳಿ ಕೇರಿ ಶಾಂತವಾದ ಮೇಗೆ ಬರುವಿರಿ' ಎಂದು ನಿರ್ಣಯಿಸಿ, ಬಡ್ಡ, ಶೀನ, ಗಡ್ರ, ಬಸಿಯರನ್ನು ಕಾಡಿಗೆ ಕಳುಹಿಸಿ ನಿದ್ರೆ ಹೋದರು. ಈ ಹಿರಿಯರು ಊರಿನ ಜನರಿಗೆ ಹೊಂದಿಕೊಂಡು, ನೋವನ್ನು ನುಂಗಿಕೊಂಡು ಜೀವನ ಸಾಗಿಸುತ್ತಿದ್ದವರು.

ಮಧ್ಯರಾತ್ರಿಯಲ್ಲಿ ಊರಿನ ಮೇಲ್ವರ್ಗ ಮತ್ತು ಎಲ್ಲಾ ಹಿರಿಯರು ಸೇರಿಕೊಂಡು ಕಿಂಚಿತ್ತೂ ಯೋಚಿಸದೆ, ಸಣ್ಣಹುಡುಗ ಮಾಡಿದ ತಪ್ಪಿಗೆ ಇಡೀ ಕೇರಿಗೆ–ಕೇರಿ ಜನರಿಗೆ ಬಹಿಷ್ಕಾರ ಹಾಕಿದರು. ಇವರ ಈ ಬಹಿಷ್ಕಾರದಲ್ಲಿ ಎಳ್ಳಷ್ಟೂ

ನ್ಯಾಯವಿರಲಿಲ್ಲ. ಅಂದು ರಾತ್ರಿಯೇ ಕೇರಿಗೆ ನುಗ್ಗಿ ಎಲ್ಲರನ್ನು ಎಳೆದು ಹೊಡೆದರು. ಗುಡಿಸಲಿಗೆ ಬೆಂಕಿ ಹಚ್ಚಿದರು, ಮನೆಯ ಹೆಂಚುಗಳನ್ನು ಒಡೆದರು, ರಕ್ತದ ಕೋಡಿಹ ರಿಸಿದರು. ಕೇರಿ ರಕ್ತದಲ್ಲಿ ಮುಳುಗೆದ್ದಿತು. ಭಾರತ ಸರಕಾರದ ಕಾನೂನು ಮಾತ್ರ ಮೌನವಹಿಸಿತ್ತು. ಈ ವಿಚಾರ ತಲೆಮರೆಸಿಕೊಂಡಿದ್ದ ಯುವಕರಿಗೆ ತಲುಪಿ, ಅವರಲ್ಲಿ ತಮ್ಮ ಕೇರಿಯನ್ನು ಕೇರಿ ಜನರನ್ನು ರಕ್ಷಿಸುವ ಛಲ ಹುಟ್ಟಿಸಿತು. ಮೇಲ್ವರ್ಗದ ಸವರ್ಣೀಯರನ್ನು ಕೊಚ್ಚಿಹಾಕುವ ರೋಷ ಉಕ್ಕಿಸಿತು. ಇವರು ಕಾಡಿನಿಂದ ಕೇರಿಗೆ ಬಂದಾಗ ಕೇರಿಯ ಹಿರಿಯ ವ್ಯಕ್ತಿ ಭೂತಜ್ಜನ ಮಾತಿಗೆ ಬೆಲೆಕೊಟ್ಟು ಶಾಂತರಾಗಿ ತಮ್ಮ ಕೆಲಸಗಳಲ್ಲಿ ತೊಡಗಿಸಿಕೊಂಡರು. ಕೇರಿಯ ಜನ ಎಂದಿನಂತೆ ಬೇರೆ ಊರಿಗೆ ಹೋಗಿ ಕೆಲಸ ಮಾಡಿ ಬರುತ್ತಿದ್ದರು. ಕೆಲವರು ಅದೇ ಊರಿನ ಹೊಲಗದ್ದೆಗಳ ಕೆಲಸಗಳಲ್ಲಿ ತೊಡಗಿಸಿಕೊಂಡಿದ್ದರು.

ಹೀಗಿರುವಾಗ ಶ್ರಾವಣ ಮಾಸದಲ್ಲಿ ಊರ ಬಸಪ್ಪ ದೇವರ ದೊಡ್ಡ ಹಬ್ಬ ಬಂತು. ಅದಕ್ಕೆ ಕೇರಿಯವರಿಗೆ ಪ್ರವೇಶ ಇರಲಿಲ್ಲ. ಇದನ್ನರಿತ ಬಡ್ಡ ಮತ್ತು ಅವನ ಸ್ನೇಹಿತರು ಇದನ್ನು ವಿರೋಧಿಸದೆ, ತಮ್ಮ ಕೇರಿಯ ಜನರಿಗೆ ಏನಾದರೂ ಒಳ್ಳೆಯದು ಮಾಡಬೇಕೆಂದೂ, ತಮ್ಮ ಇಡೀ ಕೇರಿಯ ಜನರೂ ಹಬ್ಬದ ಸಂಭ್ರಮ ಸವಿಯಲಿ ಎಂದು ಸುಣ್ಣದ ಕೊಪ್ಪಲಿನಲ್ಲಿರುವ ತಮ್ಮವನೇ ಆದ ಶಿಂಗಾರಿಯ ಹೊಲದಲ್ಲಿರುವ ಮಾರೆವ್ವನ ಮೂರ್ತಿಯನ್ನು ಬಾಡಿಗೆ ತಂದು ಹಬ್ಬ ಆಚರಿಸಬೇಕೆಂದು ತೀರ್ಮಾನಿಸಿದರು. ಅದರಂತೆ ಶೀನ, ಬಡ್ಡ, ಬಸಿಯ, ಮತ್ತು ಗಡ್ರ ನಾಲ್ಕು ಜನ ಸುಣ್ಣದ ಕೊಪ್ಪಲಿಗೆ ಶಿಂಗಾರಿಯ ಮನೆಗೆ ಬಂದಾಗ ಶಿಂಗಾರಿ ಕೋಳಿಕೂಗೋವತ್ತಿಗೆ ಹೊಲಕ್ಕೆ ಹೋದ ವಿಚಾರ ಅವನ ಹೆಂಡತಿಯಿಂದ ತಿಳಿಯುತ್ತದೆ. ಶಿಂಗಾರಿ ಮೃದು ಸ್ವಭಾವದವನು. ಅವನಾಯಿತು ಅವನ ಕೆಲ್ಸ ಆಯಿತು. ಕೇರಿಲೆ ಯಾರ ತಂಟೆ ತಕರಾರಿಗೂ ತಲೆಕೊಟ್ಟೋನಲ್ಲ. ಮುಂಜಾನೆ ಎದ್ದು ಹೊಲಕ್ಕೆ ಹೋದರೆ ಸೂರ್ಯ ಮುಳುಗುವಾಗಲೇ ಹಟ್ಟಿಗೆ ವಾಪಾಸ್ಸು ಬರುತ್ತಿದ್ದ. ಅವನ ಅಜ್ಜನ ಹೊಲದಲ್ಲಿದ್ದ ಬೇವಿನ ಮರದ ಕೆಳಗೆ ಮಾರೆವ್ವನ ಮೂರ್ತಿಯಿತ್ತು. ಶಿಂಗಾರಿಯ ಅಪ್ಪ ತೀರಿಕೊಂಡ ಮೇಲೆ ಮಾರೆವ್ವನ ಪೂಜೆಯನ್ನು ದಿನನಿತ್ಯ ಮಾಡ್ತ ಹೊಲದ ಕೆಲ್ಸ ಮಾಡುತ್ತಿದ್ದ ಶಿಂಗಾರಿ. ಬೇಕಾದರೆ ಅವನು ಹೆಂಡತಿ ಮಕ್ಕಳನ್ನ ಬಿಟ್ಟಾನು ಮಾರೆವ್ವನ ಪೂಜೆ ಮಾತ್ರ ಬಿಡುತ್ತಿರಲಿಲ್ಲ ಎಂದು ಶಿಂಗಾರಿಯ ಗುಣ ಸ್ವಭಾವವನ್ನು ಕಥೆಗಾರರು ವಿಶ್ಲೇಷಿಸುತ್ತಾ ಅವನಲ್ಲಿದ್ದ ದೈವಭಕ್ತಿ ಎಂಥದ್ದೆಂದು ತಿಳಿಸುತ್ತಾರೆ.

ಹೊಲದಲ್ಲಿದ್ದ ಶಿಂಗಾರಿಯನ್ನ ಭೇಟಿಮಾಡಿದ ಬಡ್ಡ ಮತ್ತು ಅವನ ಗೆಳೆಯರು ತಮ್ಮನ್ನು ಪರಿಚಯಿಸಿಕೊಂಡು, ಊರಲ್ಲಿ ಆದ ಘಟನೆಯನ್ನು ವಿವರಿಸಿ ಹೇಳಿದಾಗ ಶಿಂಗಾರಿ 'ಅದ್ಕೆ ನಾಯೆನ್ನ ಮಾಡ್ಬೇಕು' ಎಂದು ಕೇಳುತ್ತಾನೆ. ಆಗ ಬಡ್ಡ

'ಶಿಂಗಾರಣ್ಣ ನಿನ್ನ ಹೊಲ್ದಲ್ಲಿ ಪೂಜೆ ಮಾಡ್ತಿದ್ದಯಲ್ಲ ಮಾರೆವ್ವನ್ನ ಕೊಡ್ಬೇಕು' ಅಂತ ಪ್ರಸ್ತಾಪಿಸಿದಾಗ ಶಿಂಗಾರಿ ಮಾರೆವ್ವನ್ನ ಕೊಡಲು ಸಂಪೂರ್ಣವಾಗಿ ನಿರಾಕರಿಸುತ್ತಾನೆ. "ನಿಮ್ಮ ತಲೆಗಿಲೆ ಕೆಟ್ಟಿಲ್ಲ ತಾನೆ, ನನ್ನ ಮಾರೆವ್ವನ್ನ ಕೊಡೋದಾ? ಇದು ಆಗ್ದ ಇಚಾರ. ನಮ್ಮ ಅಯ್ಯ ಸತ್ತಾಗಲಿಂದೂವೆ ಅರವತ್ತು, ಎಪ್ಪತ್ತು ವರ್ಷದಿಂದಲೂವೆ ಬೇವಿನ ಮರದ ಕೆಳ್ಗೆ ಅತ್ತ, ಇತ್ತ ವಸ್ಸಿ ಮಿಸ್ಸಕಾಡಿಸಿಲ್ಲ, ನಾ... ಒಂದು ಚೂರು ನೋವು ಕೊಟ್ಟಿಲ್ಲ. ನೀವು ಬಂದು ಕೇಳ್ಯಾದ್ಯಾಟಿಗೆ ಕೊಟ್ಟು ಬುಡಕಯ್ತಾದಾ" ಎಂದು ಶಿಂಗಾರಿ ಬಡ್ಡ ಮತ್ತು ಅವನ ಗೆಳೆಯರ ಅಪೇಕ್ಷೆಯನ್ನ ತಿರಸ್ಕರಿಸುತ್ತಾನೆ. ಶಿಂಗಾರಿಗೆ ಮಾರೆವ್ವನೇ ಜಗತ್ತು ಮತ್ತು ಅವನ ಉಸಿರು ಎಂದು ತಿಳಿದು ಬರುತ್ತದೆ. ಆದರೂ ಬಡ್ಡ ಮತ್ತು ಅವನ ಗೆಳೆಯರು ಶಿಂಗಾರಿಗೆ ವಂಶ ರಕ್ತಸಂಬಂಧ, ಕುಲ, ಜಾತಿ ಹೆಸರು ಹೇಳಿ ಅವನ ಮನ ಒಲಿಸುತ್ತಾರೆ. ಶಿಂಗಾರಿಗೆ ಮಾರೆವ್ವನ್ನ ಮೂರು ದಿನ ಕೊಡುವುದಕ್ಕೆ ಪ್ರತಿಯಾಗಿ ಐದು ಸೇರು ರಾಗಿ, ಒಂದು ಸೇರು ಅಕ್ಕಿ, ಎರಡು ರೂಪಾಯಿ ನಾಕಾಣೆ ದುಡ್ಡು ಕೊಡಲೊಪ್ಪಿದರು.

ಹೀಗೆ ಮಾರೆವ್ವನ ಬಾಡಿಗೆ ತಂದು ಕೇರಿಯಲ್ಲಿ ಪ್ರತಿಷ್ಠಾಪಿಸುವ ವಿಚಾರವನ್ನು ಹಟ್ಟಿಯ ಹಿರೀಕ ಭೂತಜ್ಜನಿಗೆ ತಿಳಿಸಿ ಹಟ್ಟಿ ಮಂದಿಗೆ ಇದರಿಂ ದ ಒಳ್ಳೆಯದಾಗುತ್ತದೆಂದು ತಿಳಿಸಿದರು. ಕೇರಿಯಲ್ಲಿ ಸಂಭ್ರಮದ ವಾತಾವರಣ ನಿರ್ಮಿಸಿದರು. ಈ ವಿಚಾರ ಇಡೀ ಊರಿನ ಜನರಿಗೆ ಹಬ್ಬಿತು. ಕೇರಿಯಲ್ಲಿ ಹಂದ್ರ ಹಾಕಿ ಮಾರೆವ್ವನ್ನ ಪ್ರತಿಷ್ಠಾಪಿಸಿ ಅನೇಕ ಹೂವುಗಳಿಂದ ಅಲಂಕರಿಸಿದರು. ಭೂತಜ್ಜನೇ ಪೂಜೆ ನೆರವೇರಿಸಿದ. ಆಮೇಲೆ ಎಲ್ಲರಿಗೂ ಪ್ರಸಾದ ಹಂಚಿದರು. ನಂತರ ಪಂಚಮಹಾವಾದ್ಯಗಳನ್ನು ನುಡಿಸಿದರು. ಆ ಮೂಲಕ ಕೇರಿಯವರೆಲ್ಲರೂ ಸಂಭ್ರಮಿಸಿದರು. ಈ ಬಾಡಿಗೆ ದೇವರ ಪೂಜೆ ಸತತ ಮೂರು ವರ್ಷಗಳ ಕಾಲ ನಡೆಯಿತು. ಇದರಿಂದ ಊರಲ್ಲಿದ್ದ ದ್ವೇಷ ಮಾಯವಾಗಿ ಪ್ರೀತಿ ಮೂಡಿತು. ಊರಿನ ಎಲ್ಲರೂ ಒಟ್ಟಾಗಿ ಸೇರಿ ಬಾಡಿಗೆ ದೇವರ ಪೂಜೆ ಬೇಡ, ಊರಿನ ಬಸಪ್ಪ ದೇವರ ಹಬ್ಬವನ್ನು ವರ್ಷಕ್ಕೊಮ್ಮೆ ಮಾಡೋಣವೆಂದು ತೀರ್ಮಾನಿಸಿದರು

ಇಲ್ಲಿ ಕಥೆಗಾರರು ಬಾಡಿಗೆ ದೇವರ ಪೂಜೆಯಿಂದ ಊರಿನ ದ್ವೇಷಮಯ ವಾತಾವರಣ ತಿಳಿಗೊಂಡ ಬಗೆ, ದ್ವೇಷಕ್ಕೆ ಪ್ರತಿದ್ವೇಷ ಸಾಧಿಸದ ಕೇರಿಯ ಜನರ ಮುಗ್ಧತೆ, ಅವರಲ್ಲಿರುವ ತಾಳ್ಮೆ, ಪ್ರೀತಿಯಗುಣವನ್ನು ಎತ್ತಿತೋರಿಸುತ್ತಾರೆ. ಅದಕ್ಕಾಗಿ ಬಾಡಿಗೆ ದೇವರ ಪೂಜೆಯನ್ನು ರೂಪಕವಾಗಿ ನೀಡುತ್ತಾರೆ. ಇದನ್ನು ಬಾಡಿಗೆ ದೇವರು ಎನ್ನುವ ಬದಲು ಎರವಲು ದೇವರು ಎಂದು ಕರೆದಿದ್ದರೆ ಔಚಿತ್ಯಪೂರ್ಣವಾಗುತ್ತಿತ್ತು. ಏಕೆಂದರೆ ಸಂಬಂಧದಲ್ಲಿ ಬಾಡಿಗೆ ಎಂಬುದು ಕೃತಕವಾಗಿ ಕಂಡುಬರುತ್ತದೆ. ಅದು ಸಂಬಂಧವನ್ನು ವಿಘಟಿಸಿ ವ್ಯವಹಾರ ಮನೋಭಾವ ಬೆಳೆಸುತ್ತದೆ. ಅದರಲ್ಲೂ

ಹಳ್ಳಿಗರಲ್ಲಿ ದೇವರಿಗೆ ಅಕ್ಕಿಪಡೆ, ಉಲುಪಿ ಕೊಡುವ ಪದ್ಧತಿ ಇದೆ. ಈ ಕುರಿತು ಚಿಂತಿಸುವ ಅಗತ್ಯವಿದೆ.

**ಆಕರ ಗ್ರಂಥ:**

1. ಹೆಬ್ಬಾಲೆ ಕೆ. ನಾಗೇಶ. (2010). ಬಾಡಿಗೆ ದೇವರು. ರುಚಿರ ಪ್ರಕಾಶನ. ಹೊಸಪೇಟೆ.